CC-O. In Public Domain. Digitized by eGangotri

ಪ್ರಥಮ ಮುದ್ರಣ

ಐದು ಶುಕ್ರವಾರದ ಹಾಡು

ಮತ್ತು

ಶುಕ್ರವಾರದ ಗೌರೀ ಹಾಡು

ಕಾರ್ತೀಕ್ ಪ್ರಕಾಶನ

ಐದನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು - 70.

Sri Vidyabharathi Book Centre, Sringeri

CC-O. In Public Domain. Digitized by eGangotri

ಮುದ್ರಣ :

ಅಧಿಕೃತ ಮಾರಾಟಗಾರರು :

ಬಿ. ಎನ್. ಕೃಷ್ಣಯ್ಯಶೆಟ್ಟಿ ಅಂಡ್ ಸನ್

ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು

234, ಚಿಕ್ಕಪೇಟೆ, ಬೆಂಗಳೂರು : 560 053

ದೂ : 080-2225 8217 • ಮೊ : 98802 25598

ಸಹನಾ ಗ್ರಾಫಿಕ್ಸ್

ಇಂದಿರಾಗಾಂಧಿ ವೃತ್ತ,

ಬೆಂಗಳೂರು – 560 078.

ಮುದ್ರಣ :

ಶ್ರೀ ವೆಂಕಟೇಶ್ವರ ಪ್ರಿಂಟಿಂಗ್ ಪ್ರೆಸ್

ನಂ. 57, 9ನೇ ಕ್ರಾಸ್, ಇಂದಿರಾಗಾಂಧಿ ವೃತ್ತ,

ಬೆಂಗಳೂರು – 560 078. ದೂರವಾಣಿ : 22444763

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರಾವಣ ಸಂಪತ್ತು

ಐದು ಶುಕ್ರವಾರದ ಹಾಡು

(ಶ್ರಾವಣದ ಶುಕ್ರವಾರಗಳು)

ಹರನ ಕುಮಾರನ ಚರಣಕಮಲಕ್ಕೆರಗಿ । ಶಾರದೆಗೆ
ವಂದಿಸುವೆ ।। ಶರಧಿಶಯನನಿಗೆ ಶರಗೊಡ್ಡಿ
ಬೇಡುವೆ ಶರಧಿ ಸುತರ ಕಥೆಯೊರೆವೆ ।। ೧ ।।

ಸಾಕ್ಷಾತ್ ಶ್ರೀಹರಿ ವಕ್ಷಸ್ಥಳ ವಾಸಿಯೆ । ಇಕ್ಷುಕ್ಷೇಪಣನನ್ನ
ಪಡೆದಾ ।। ಮೋಕ್ಷ ದಾಯಕಳೆ ಶ್ರೀಲಕ್ಷ್ಮಿಯೇ
ಕರುಣಾ । ಕಟಾಕ್ಷದಿ ನೋಡಬೇಕೆನ್ನಾ ।। ೨ ।।

ಶ್ರಾವಣಮಾಸದ ಮೊದಲ ಶುಕ್ರವಾರ ಮಾ । ಧವನರಸಿ
ಮಹಾಲಕ್ಷ್ಮೀದೇವಿಯ ಮಹಿಮೆ ಕೊಂಡಾಡುವದೀ
ಕಥೆ । ಕೇಳುವುದು ಕಿವಿಗೊಟ್ಟು ಜನರು ।। ೩ ।।

ಇರುತಿರಲೊಂದು ಪಟ್ಟಣದೊಳು । ಬ್ರಾಹ್ಮಣನ ಮಡದಿ
ಮಕ್ಕಳು ಸಹಿತವಾಗಿ ।। ಹಿಡಿದು ತಂಬುರಿ ತಂಬಿಗೆಯ
ಗೋಪಾಳಕ್ಕೆ ಬಿಡದೊಯ್ದು ಮನೆ ತಿರುಗುತಲೀ ।। ೪ ।।

ಸೊಸೆಯರು ನಾಲ್ಕು ಮಂದಿಯು ಗಂಡುಮಕ್ಕಳು ।।
ಹಸುಗೂಸುಗಳು ಮನೆ ತುಂಬಾ ।। ಅಶನವಸನಕ್ಕಿಲ್ಲ ಹಸಿದ
ಮಕ್ಕಳಿಗ್ಹಾಲು । ಮೊಸರು ಅನ್ನವು ಮೊದಲಿಲ್ಲ ।। ೫ ।।

ಅತಿಗುಣವಂತರು ಗತಿಯಿಲ್ಲ ಗ್ರಾಸಕ್ಕೆ । ಮಿತಭೋಜನವೇ
ಮಾಡುವುದು ।। ವ್ರತನೇಮನಿಷ್ಠ ನಿರತ ದರಿದ್ರನನ್ನು ।
ಶ್ರೀಪತಿ ದಯಾದಿ ನೋಡುವಳೂ ।। ೬ ।।

ಒಂದು ದಿನ ಮಂದಿರದಲ್ಲಿ । ಚಂದಾದಿ ಸುಣ್ಣ
ಸಾರಣೆಯೂ ।। ರಂಗವಾಲಿಯ ಚಿತ್ರ ಬಣ್ಣ ಕರಣ ಮಾಡಿ ।
ಮುಂದೆ ತೋರಣವ ಕಟ್ಟುತಿಹರು ।। ೭ ।।

ಮನೆಮನೆಯಲ್ಲಿ ಮಹಾಲಕ್ಷ್ಮೀದೇವಿಯರ ಬರುವಿಕೆನ
ತಾ ಕಂಡು ಇದು ಯೇನು ।। ನೋಡೆ ಎನಗೆ
ಹೇಳಬೇಕೆಂದು ಘನಭಕ್ತಿಯಿಂದ ಕೇಳಿದನು ।। ೮ ।।

ಶ್ರೀ ವಿದ್ಯಾ ಭಾರತೀ ಪುಸ್ತಕ ಕೇಂದ್ರ
ಭಾರತೀ ಬೀದಿ, ಶೃಂಗೇರಿ - 577 139

Sri Vidyabharathi Book Centre, Sringeri

CC-O. In Public Domain. Digitized by eGangotri

ಕ್ಷೀರಸಾಗರದಲ್ಲಿ ಹುಟ್ಟಿದ ಮಹಾಲಕ್ಷ್ಮೀ । ದೇವಿ
ದೇವರ ಪಟ್ಟದರಸೀ ।। ಶ್ರಾವಣ ಸಂಪತ್ತು ಶುಕ್ರವಾರ
ನಾವು ಪೂಜೆಯ ಮಾಡಬೇಕು ।। ೯ ।।

ಎನಗೊಂದು ಚಟ್ಟಿಗೆ ಬರೆದುಕೊಟ್ಟರೆ ನಮ್ಮ
ಮನೆಯೊಳಗಿಟ್ಟು ಪೂಜಿಪೆನು ವಿನಯದಿಂದ್ಹೇಳಿಕೊಂಡರೆ
ಒಂದು ಚಟ್ಟಿಗೆ ಬರೆದುಕೊಟ್ಟರೆ ಬಲಗೈಲೀ ।। ೧೦ ।।

ಸಿರಿದೇವಿ ಚಟ್ಟಿಗೆ ಹಿಡಿದು ಗೋಪಾಳಕ್ಕೆ । ಹೋದನು
ಮನೆಮನೆಯಲ್ಲಿ ಗೋಧಿಯಕ್ಕಿ ಬೇಳೆ ಬೆಲ್ಲವ ತುಪ್ಪವ
ತಂದು ನಿಂತಾರು ಹಿಡಿಹಿಡಿರೆನುತ ।। ೧೧ ।।

ತಂದು ಪದಾರ್ಥ ತನ್ನ ಹೆಂಡತಿ ಕರೆದು । ಮುಂದಿಟ್ಟು
ವಾರ್ತೆಯನು ಕೇಳಿದರು ಇಂದಿರಾದೇವಿ ಹಾಗೆಂದು
ಪೂಜೆಯ ಮಾಡೆ ಆನಂದ ಕೊಡುವಳು ನಮಗೆ ।। ೧೨ ।।

ಕಬ್ಬ ಬಿಲ್ಲೊಡೆವ ಕಾಮನಮಾತೇ ಮಹಾಲಕ್ಷ್ಮೀ
ಉರ್ವಿಯೊಳುತ್ತ ಮಳೀಕೆ ಹಬ್ಬದೂಟಕ್ಕೆ ಬಂದ
ಬ್ರಾಹ್ಮಣರಿಗೆ । ಮತ್ತೊಬ್ಬ ಮುತ್ತೈದೆಗ್ಹೋಳೆಂದಾ ।। ೧೩ ।।

ಚಿಕ್ಕಸೊಸೆಯ ಎಣ್ಣೆ ಕೈಯಲ್ಲಿ ಕುಂಕುಮ । ತಕ್ಕೊಂಡು
ನಡೆದಾಳ್ಹಾದಿಯಲ್ಲಿ ಚೊಕ್ಕ ಚಿನ್ನದ ಗೊಂಬೆಯಂತಿದ್ದ
ಮುತ್ತೈದೆ ಪಕ್ಕನೆ ಬಂದು ಕೇಳಿದಳು ।। ೧೪ ।।

ಹುಡುಗಿ ನೀನೆತ್ತ ಪೋಗುವೆ ನಿಮ್ಮ ಮನೆಯಲ್ಲಿ ।
ಅಡಿಗೆ ಏನೇನು ಮಾಡುವಿರೇ ಹಿಡಿದೆಣ್ಣೆ ಕುಂಕುಮ
ಕೊಡುವುದಿನ್ಯಾರಿಗೆ । ಕೊಡಬಾರದೇನೆ ನೀನೆನಗೆ ।। ೧೫ ।।

ಯಾರಾದರೇನಮ್ಮ ದಾರಿ ನೋಡದೆ ಮುಂಚೆ । ನೀನೇ
ಬಾ ನಮ್ಮ ಮಂದಿರಕ್ಕೆ । ಹೇಳಿ ಮುತ್ತೈದೆಗೆ
ಹಿಗ್ಗಿದಳಪರಂತೆ । ಮಾವನ ಮುಂದರುಹಿದಳು ।। ೧೬ ।।

ಮನೆಯ ಸಾರಿಸಿ ಸುಣ್ಣ ಸಾರಣೆ ರಂಗೋಲೆಯ । ಬರೆದು
ಬಾಗಿಲಿಗೆ ಬಣ್ಣವನ್ನು ।। ತಳಿರು ತೋರಣ ಕಟ್ಟಿ ಈರ್ವರು
ಸಂಭ್ರಮದಿಂದ । ಎರೆದುಕೊಂಡರೆಲ್ಲರು ಬೇಗ ।। ೧೭ ।।

Sri Vidyabharathi Book Centre, Sringeri

CC-O. In Public Domain. Digitized by eGangotri

ಕಮಲ ಕೇದಿಗೆ ಕಬ್ಬು ಕದಳಿಕಂಬ ಬಾಳೇ । ಗೊನೆ ಕಟ್ಟಿ
ಚಿತ್ರಮಂಟಪವೂ ।। ಎಡಬಲದಲ್ಲಿ ನಾಲ್ಕು ನಂದಾದೀಪಿಗೆ
ಹಚ್ಚಿ ।। ನಡುವೆ ಶ್ರೀ ಪದ್ಮ ಪೀಠಗಳು ।। ೧೮ ।।

ಚಟ್ಟಗಿವಳಗ್ಹಾಕಿ ಐದು ಫಲವ ತುಂಬಿ । ಮುತ್ತೈದೆಯರಿಗೆಲ್ಲಾ
ನೆರೆದು ।। ಕಟ್ಟಿದರು ತೋರಣಮಾಂಗಲ್ಯ ಮಹಾಲಕ್ಷ್ಮೀಗೆ ।।
ಪ್ರತಿಷ್ಠೆ ಮಾಡಿದರು ಸಂಭ್ರಮದಿ ।। ೧೯ ।।

ಆರಿಶಿನ ಕುಂಕುಮ ಗಂಧ ಬುಕ್ಕಿಟ್ಟು ಗೆಜ್ಜೆ । ವಸ್ತ್ರ
ಪಾರಿಜಾತ ಸಂಪಿಗೆಯ ।। ಮುಡಿಸಿ ಮಲ್ಲಿಗೆ ದಂಡೆ
ಇಡಿಸಿ ತೆಂಗಿನಕಾಯಿ ಉಡುತುಂಬುತ್ತತ್ತಿಫಲಗಳು ।। ೨೦ ।।

ಭಕ್ಷ್ಯ ಶಾವಿಗೆ ಪರಮಾನ್ನ ಚಿತ್ರಾನ್ನ । ಸಣ್ಣಕ್ಕಿ
ಶಾಲ್ಯನ್ನಸೂಪಗಳು ।। ಚಕ್ಕುಲಿ ಗಿಲಗಂಜಿ
ಚಂದುಬ್ಬೇರುವ । ಹಪ್ಪಳ ಸಂಡಿಗೆ ಆಂಬೋಡೆಗಳು ।। ೨೧ ।।

ಸಕ್ಕರೆ ಘೃತಕ್ಷೀರ ಸಕಲಪಕ್ವನ್ನ । ಮಂಡಿಗೆ ಬೀಸೂರಿಗೆ
ಗುಳ್ಳೋರಿಗೆಗಳೂ ಚಂದ್ರನಂತ್ಹೊಳೆವ ಶಾವಿಗೆ ಫೇಣಿ
ಆ ದಿವ್ಯ । ಬುಂದಿ ಬುರಿಬುರಿ ಅನ್ನರಸವೂ ।। ೨೨ ।।

ಬೇಕಾದ ಬೇಸನ್ನ ಬೆಳೆಯದಳೇದುಂಡಿಗೆ । ಮೋತಿಚೂರು
ಚೂರ್ಣಲಾಡು ಸೇತುಟಕರ ಬೀಳುಪಿನಂತೆ ಜಿಲೇಬಿ
ಸುಖಿನುಂಡೆ ಮುಖ ವಿಲಾಸಗಳು ।। ೨೩ ।।

ಹೋಳಿಗೆಣ್ಣೂರಿಗೆ ಹೋಯ್ದೋಸೆ ಆಹಾರ ।।
ತೈಲದೀಕರೀದ್ದೂರಣಕಡುಬೂ ।। ಸುರುಳಿ ಹೋಳಿಗೆ
ಉದ್ದಿನಬೇಳೆ ಮೆಣಸಿನಕಾಯಿ । ಇಂಗಿನಿಂದೊಪ್ಪುವ ಕಡಬೂ ।। ೨೪ ।।

ಸಾರು ಸಾಂಬಾರ ಸಾಸುವೆ ಕಾಯಿಪಲ್ಯದ । ಉಪ್ಪೇರಿ
ಉಪ್ಪಿನಕಾಯಿ ರಸವೂ ।। ಕೀರ ಮಾಲತಿ ಗವಲಿ ಪಸಡಿ
ಪರಮಾನ್ನ । ಮುನ್ಸಾರ ಚಟ್ಟಣ ಕೋಸಂಬ್ರಿಗಳು ।। ೨೫ ।।

ಹಾಗಲಕಾಯಿ ಸೌತೆಹಂದರದವರ ಹೀರೆ । ಬಾಳೆ ಬೆಂಡೆ
ಕುಂಬಳವೂ ।। ಮಾಗಿದಲಸಿನಕಾಯಿ ಕಲಸುಮೇಲೋಗರ ।
ಗೆಣಸು ಗುಳದಕಾಯಿ ಬೀಜಗಳು ।। ೨೬ ।।

CC-O. In Public Domain. Digitized by eGangotri

ನಿಂಬಿಬಾತು । ತೌತೌಬಾತು । ಕೇಸರಿಬಾತು ।
ಕೆನೆಕೆನೆ ಮೊಸರು ವಗ್ಗರಣೇ । ಬಿಸಿಹಾಲು
ಹೊಸಬೆಣ್ಣೆಯಿಂದೊಪ್ಪುವ । ಕಲಸು ಬಕಾಳಿಭಾತುಗಳು ॥೨೭॥

ಮುದ್ದು ಮಹಾಲಕ್ಷ್ಮಿಗೆ ನೈವೇದ್ಯ ಮಾಡಿದರು ।
ಅನಿರುದ್ಧ ಮೂರ್ತಿ ಸಹಿತಾಗ ಶುದ್ಧ ಸುಣ್ಣವು
ಯಲೆಡಿಕೆಯಾಲಕ್ಕಿ । ಪತ್ರೆಕಾಯಿ ಕಾಚು ಲವಂಗ ॥೨೮॥

ಹಚ್ಚಿಕೊಂಡಲ್ಲರಸಿನ ಗಂಧ ಕುಂಕುಮ ।ಛತ್ರಿಚಾಮರ
ಬೀಸುತಲೀ । ಅಚ್ಯುತನರಸಿ ಅನುಗ್ರಹದೆ ನೋಡಿದಳ್
ಮೆಚ್ಚಿ । ಮುಚ್ಚಿದ್ದ ಕಣ್ಣನು ತೆರೆದು ॥೨೯॥

ಅಮರಾದಿಸುತರೊಡೆಯನ ರಾಣಿ ಲಕ್ಷ್ಮಿಗೆ
ಸರ್ವಸಮರ್ಪಣೆ ಮಾಡಿ ನಮೋ ನಮೋಯೆಂದು ಕೈಮುಗಿದು
ಮಂತ್ರಾಕ್ಷತೆ । ಶಿರದಲ್ಲಿ ತೂರುತ ಬೇಡುವರೂ ॥೩೦॥

ಹಾಡುತ್ತ ಪಾಡುತ್ತ ಮಾಡುತಲಾರತಿ । ಬೇಡುತ್ತ
ಮುಡಿದು ಮಲ್ಲಿಗೆಯಾ ನೋಡುತ್ತ ನಲಿದಾಡುತ್ತ
ತಾ ದಯಮಾಡು ಕೊಟ್ಟಳಾಗೊರವ ॥೩೧॥

ಹೊತ್ತು ಬಹಳವಾಯಿತು ಮುತ್ತೈದೆ ಬರಲ್ಲಿಲ್ಲ ।
ಮತ್ತೇನು ಇದಕ್ಕೆ ಉಪಾಯ ಅಷ್ಟು ಅಡಿಗೆಯಲಿ ಬಡಿಸಿ
ಕುಂಕುಮ ವೀಳ್ಯ ಇಟ್ಟು ಪುಟ್ಟಿಯನ್ನು ಮುಚ್ಚಿದರು ॥೩೨॥

ಗಂಡಹೆಂಡಿರು ಕೂಡಿ ಬ್ರಾಹ್ಮಣರೊಡಗೂಡಿ ಉಂಡು
ವೀಳ್ಯವನೆತಕ್ಕೊಂಡು ॥ ಇಂದು ನಮಗೆ ಜಯ
ಶುಭಕಾಲ ಬಂದಿತು । ಹೀಗೆಂದು ಸಂತೋಷಪಡುವರು ॥೩೩॥

ಮರುದಿನ ಸಂಪತ್ತು ಶನಿವಾರ । ಹಿಟ್ಟಿನ ಕಡುಬು
ಗವಲಿ ಪರಮಾನ್ನ ॥ ತಿಳಿಗಾಣದೊಳ್ಕೆಣ್ಣೆ ಹಿಂಡಿಯ
ಪಲ್ಯನೆಗೌರಿಯ ಪೂಜೆಯ ಮಾಡಿಟ್ಟರು ನೈವೇದ್ಯವನೂ ॥೩೪॥

ಎರಡನೆಯ ಶುಕ್ರವಾರ ದಿನ ಮುತ್ತೈದೆಗೆ । ದೃಢವಾಗಿ
ಹೇಳಿ ಬಾ ಎನುತ ಎಣ್ಣೆಗೈಯ್ ಮುಚ್ಚಿಕೊಂಡೆಣ್ಣೆ
ಕುಂಕುಮವನ್ನು ಹಿಡಿದಳಿನ್ನೊಂದು ಪಥವನೂ ॥೩೫॥

Sri Vidyabharathi Book Centre, Sringeri

CC-O. In Public Domain. Digitized by eGangotri

ಬಜಾರು ಬಿಟ್ಟು ಬದಲ ಮಾರ್ಗ ಹಿಡಿಯಲು ।
ಹಾದಿಗೆ ಬಂದಡ್ಡ ಕಟ್ಟಿ ।। ಶುಕ್ರವಾರ ಹೇಳಿಯನ್ನದೆ
ಬಿಟ್ಟು ಯಾರಿಗ್ಹೇಳುವೆಯೋ ಭೋಜನಕ್ಕೆ ।।೩೬।।

ನಮ್ಮಗೊಡವೆ ಯಾತಕಮ್ಮ ನಿಮಗೆ ಸುಮ್ಮನ್ಹೋಗು ।
ಶುಕ್ರವಾರದಲ್ಲಿ ।। ನಿಮ್ಮ ಎಲೆಯ ಬಡಿಸಿ ಅಂದಿಗಿಂದಿಗೆ
ಅದೇ ಊಣ ಬೇಕಾದರ್ಹೋಗಮ್ಮ ।।೩೭।।

ತಂಗಳೂಟಗಳುಂಬೊ ಕಂಗಾಳಿ ನಾನಲ್ಲ ।
ಭಂಗಾರದಂತ ಮುತ್ತೈದೆ ।। ತಿಂಗಳಾಗಲಿ ಹಣ್ಣು
ನೂಲುಕಟನಲ್ಲಿ ತಂಗಳ ನಿನಗುಣಿಸುವೆನು ।।೩೮।।

ಬಡಿವಾರ ಮಾತೇಕೆ ಬಡಿಸಿಟ್ಟಿಲೆಯುಂಬೋ । ಬಡವೆಯಲ್ಲ
ನಾ ಭಾಗ್ಯವಂತೆ ತಡೆಯದೆ ಬರುವೆನು ತಾ ಎಣ್ಣೆ
ಕುಂಕುಹು । ಹಿಡಿ ಎಳೆದುಕೊಂಡು ನಡೆದಳು ।।೩೯।।

ಕೊಟ್ಟೆಣ್ಣೆ ಕುಂಕುಮ ಥಟ್ಟಾನೆ ನಡೆದಾಳು । ಅಷ್ಟು
ವಾರ್ತೆಯನೆ ಹೇಳಿದಳು । ಇಂಥ ದಿಟ್ಟ ಮುತ್ತೈದೆ ದೇಶದ
ಮೇಲೆ ಕಾಣೆನು । ಎಷ್ಟೇಳಲೇಕೆ ಚೆಲ್ವಿಕೆಯಾ ।।೪೦।।

ಸಿರಿದೇವಿಗೆ ಪೂಜೆ ನೈವೇದ್ಯಗಳಾದವು । ಬಡಿದವು
ಮೂರು ಗಂಟೆಗಳು ।। ಬರಲಿಲ್ಲ ಮುತ್ತೈದೆಯಂದದಿ
ಬಡಿಸಿಟ್ಟು । ಸರ್ವರೂಟವನೆ ಮಾಡಿದರು ।।೪೧।।

ಮಾರನೇವಾರ ಮುತ್ತೈದೆಗ್ಹೇಳುವುದು
ಮತ್ಯಾರೆಂದ್ವಿಚಾರ ಮಾಡುವುದು । ಮಾನವರ ಮುದ್ದು
ಮಾತ ನೋಡಿರೆಯೆಂದು ತಾನೋದಳಿನ್ನೊಬ್ಬ ಸೊಸೆಯು ।।೪೨।।

ಮುದಿಬಾಗಿ ಮುಚ್ಚಕೊಂಡೆಣ್ಣೆ ಕುಂಕುಮವನು ।।
ನಡೆದಳಿನ್ನೊಂದು ಓಣಿಯಲಿ ಬಡಬಡ ಬಂದು
ಕೈ ಹಿಡಿದೆಣ್ಣೆ ಕುಂಕುಮವ ಕೊಡುವದಿನ್ನಾರಿಗೌತಣವ ।।೪೪।।

ಔತಣವಲ್ಲಮ್ಮ ಅತಿ ಬಡವರು ನಾವು । ಗತಿಯಿಲ್ಲ ಗೌರಿ
ಹಬ್ಬಕ್ಕೆ ಸುತರಾಡ ।। ಹೋಗ್ಯಾರ ಹುಡುಕುತ ಬಂದೆ
ಬಿಡು ದಾರಿ । ಪತಿ ಬೈವನೆನ್ನ ಮನೆಯಲ್ಲಿ ।।೪೪।।

CC-O. In Public Domain. Digitized by eGangotri

ಒಗವುತನದ ಮಾತಿನ ಬಗೆ ನಾನು ಬಲ್ಲೆನೆ । ಹಗರಣಗಿತ್ತಿ
ನೀನ್ಹೇದು ।। ಮೊದಲಿನ ಶುಕ್ರವಾರ ಹೇಳಿ ಯನ್ನನೆ
ಬಿಟ್ಟು ।। ಬದಲು ಮುತ್ತೈದೆಗೇಳುವರೇ ।।೪೫।।

ಎರಡು ವಾರವು ಹಸಬೂದಡಿ ಉಂಟಾಯಿತು ।
ಬರಡಾಕಳಿನವುಟಿಂತೆ ।। ಕಡಲೆ ಹೂರಣ ಕರಿಕಡುಬು
ಕಾಸಿದೆ ಬೆಣ್ಣೆ । ಕಾಸಿದ ತುಪ್ಪವ ಬಡಿಸೆನಗೆ ।।೪೬।।

ಮೆಚ್ಚಿಕೊಂಡಾಕೆ ಮಾತಿಗೆ ಬೆರಗಾದಳು . ಹಚ್ಚಿ
ಕುಂಕುಮ ಎಣ್ಣೆ ಕೊಟ್ಟು ನಿಶ್ಚಯವೇನಮ್ಮ ನೀ
ಬರುವುದೇನಂದು । ಈ ಕ್ಷಣ ಬರುವೆನೋಗೆಂದಳು ।।೪೭।।

ಕೊಟ್ಟೆಣ್ಣೆ ಕುಂಕುಮ ಫಟ್ಟನೆ ಬಂದಳು ಒಂದೊಂದು
ಮಾಡಿ ವರ್ಣಿಸುತ ।। ಇಂದಾಗ ಮನಕೆ ಬಂದಂತಡಿಗೆ
ಮಾಡು । ಹೀಗೆಂದು ಸಂತೋಷಪಡುವರು ।।೪೮।।

ಕಡಲೆ ಹೂರಣ ಗಸಗಸೆ ಕೊಬ್ಬರಿ ಯಾಲಕ್ಕಿ ಪುಡಿ
ದ್ರಾಕ್ಷಿ ಉತ್ತತ್ತಿ ಹಳುಕು ಕಲಕಿ ಕಲ್ಲುಸಕ್ಕರೆ ಕರಿಕಡುಬು
ಬೆಣ್ಣೆ ಕಾಸಿ । ತುಪ್ಪವ ಸೋಸಲಿ ಅಂದಾ ।।೪೯।।

ಸಿರಿದೇವಿಗ ಪೂಜೆ ನೈವೇದ್ಯಗಳಾದವು । ಹೊರಗಾರು ಘಂಟೆ
ಬಡಿದವು ।। ಬರಿದು ಬಾರಿಸೆನೆ ಬರಿಯ ಮಾತಿನ
ಜಾಣೆ ಬರಲಿಲ್ಲಾಗೆಂದು ನುಡಿದರು ।।೫೦।।

ಹುಟ್ಟಿದ ಮೇಲಿಂಥ ಕಡುಬು ಕಂಡಿದ್ದಿಲ್ಲ । ನಿಮ್ಮೂಟ
ಪುಂಡವರು ನಾವಲ್ಲಾ ।। ಮುತ್ತೈದೆ ಪುಣ್ಯದಿಂದಾ
ಊಟ ದೊರಕಿ । ತಿಂದರು ನಗುತ ನುಡಿವರು ।।೫೧।।

ನಾಲ್ಕನೆವಾರ ನಾನ್ಹೇಳಿ ಬರುವೆನೆಂದು । ಆಕೆ
ಹೋದಳು ಮಗನರಸಿ ।। ಬೇಕಾದವರು ಬಂದು
ಕಾ[illegible] ಕೂಡ । ಯಾಕೆನಗೊಬ್ಬರ ಬಿಡೆಯೂ ।।೫೨।।

ದೊಡ್ಡ ಬಾಗಿಲಬಿಟ್ಟು ದಿಟ್ಟಿ ಬಾಗಿಲ ಮುಂದೆ । ಸದ್ದು
ಮಾಡದೆ ಬರುತಿರಲು ವಜ್ರದ ಗೊಂಬೆಯಂತ್ಹೊಳೆವ
ಮುತ್ತೈದೆ । ನಿಂತಿದ್ದಳಾಗೆದ್ದುರಿಗೆ ಬಂದೂ ।।೫೩।।

Sri Vidyabharathi Book Centre, Sringeri

CC-O. In Public Domain. Digitized by eGangotri

ಸರ್ವರೊಳಗೆ ಸೊಸೆಯ ನೀನೆಂಬಂಥ ।
ಗುರುವಾರಕಾಲದಿ ನೀನು ।। ಸರಿಯಾಗಿ ಮೂರು
ವಾರೇಳಿಯನ್ನನೆ । ಕರಿಯಾದುಂಬುವ ಕಾರಣವೇನೆ ।।೫೪।।

ಕರಿಯಲಿಕ್ಕೆ ಬರಲಿಕ್ಕೆ ಕಾಣೆ । ನಿಮ್ಮನೆ ನಾನೇ ತಿರುಗುವೆ
ನಾರದನಂತೆ ।। ಇರುವ ಮುಂದಿರುವ ತೋರಿದರೀಗಾ
ನಾನಿಮ್ಮ ಕರದುಣಿಸುವೆ ನಿಮಗೆಂದಳೂ ।।೫೫।।

ದೂರುಂಟು ನಮ್ಮಗೆ ದಾರಿ ಅಸಾಧ್ಯವು । ನೋಡಿ
ಬಂದವರು ದಾರಿಲ್ಲ ಆಹಾರ ನಿದ್ರೆ ಸಂಸಾರ
ಸಮುದ್ರವು । ಮೀರಿವರಿಗೆ ಕಾಂಬುವುದು ।।೫೬।।

ಅಂಗಾರದೊಳಗಿನ ಅರಗಿಳಿ । ಮರನೇರಿ ಮಾಗಿದ
ಫಲವು ಮೆದ್ದಂಗೆ ಬೇಗ ಬಂದೀಗ ನಿಮ್ಮನೆಯಲ್ಲೂಟವ
ಮಾಡಿ ತೇಗುವ ತೃಪ್ತಳಾಗುವೆನು ।।೫೭।।

ಮಾಯಾದೇವಿಯ ಮಾಯಾಮಾತಿಗೆ ಮರುಳಾಗಿ
ತಾ ಕೊಟ್ಟಳೆಣ್ಣೆ ಕುಂಕುಮವಾ ಹೋದಾಳ್ಯಾರಕ್ಕ
ಮಾಗೋದು ಹೆಣ್ಣೆಂದು । ಕೇಳಿಕೊಂಡಳು ಶಿಫಾರಸ್ಸು ।।೫೮।।

ಬಂದಿತಾಗೈದನೇವಾರ ಮುತ್ತೈದೆಗೆ ಇಂದು ನೀ
ಹೇಳಿಬಾಯೆನುತ್ । ಹೆಂಡತಿ ಕರೆದು ಹೇಳಿ ಕುಂಕು
ಮೆಣ್ಣೆತ । ಕ್ಕೊಂಡು ತಾ ನಡೆದಳು ಬೇಗ ।।೫೯।।

ಬೀದಿಬಿಟ್ಟು ಬದಲಾಗಿ ಬಂದಳು । ಹಾದಿಗೆ
ಬಂದಡ್ಡ ಕಟ್ಟಿ ನೀ ದಯ ಮಾಡಿ
ಬಂದಯನಗೌತಣ । ಅದರಿಂದೇಳುವುದಕ್ಕೆ ।।೬೦।।

ಜಪಿಸಿ ಬಂದು ಔತಣವ ತಕ್ಕೊಂಡು ನೀ । ತಪ್ಪಿಸಿಕೊಂಡು
ಹೋಗುವರೆ ।। ಒಪ್ಪತ್ತಾದರೆ ಊಟ ಮಾಡುವರ
ಮಾತು ಒಪ್ಪಿಕೊಂಬುವದ್ಹೇಗೆ ಹೇಳಮ್ಮ ।।೬೧।।

ಬಂದ ಔತನ ಗಂಡುಮಕ್ಕಳು ಭಾಗ್ಯ । ಒಲ್ಲೆಂಬವರುಂಟೆ
ಲೋಕದಲ್ಲಿ ।। ಕಂಡಲ್ಲೌತನ ಹೇಳಿ ಕರೆಯದಿರುವುದೇ
ಚಂದವೇ ನಿಮ್ಮ ನಡತೆಯ ।।೬೨।।

CC-O. In Public Domain. Digitized by eGangotri

ಲಕ್ಷಣವಂತೆ ನಾನೆದುರಿಗೆ ಬಂದರೆ । ಲಕ್ಷಣ ಶುಭ
ಶಕುನಗಳು ।। ಇಕ್ಷು ಮೇಲೆ ಚೇನು ಇಟ್ಟಂತೆ
ಇರುವೆನು । ಲಕ್ಷ್ಮೀಶ್ವರಿಗೆ ನಾನು ಕೊಡುವೆನು ।।೬೩।।

ಅವಕಾಶ ಕೊಡುವೆನು ಸಾವಕಾಶ ಅಡಿಗೆ ಮಾಡು ।
ದಿವಾಕರ ಮುಳುಗೋ । ಕಾಲದಲ್ಲಿ ।। ದನಕರು ಬರುವ
ವೇಳೆಗೆ ಬರುವೆನು ಮನಕೆ ಸಂದೇಹ ಬೇಡೆಂದು ।।೬೪।।

ಅಂಗಳ ಸಾರಿಸು ರಂಗತೋರಣ ಕಟ್ಟಿ । ರಂಗವಲ್ಲಿಯ
ಚಿತ್ರ ಬರೆದು ।। ಅಂಬರೂದಿನಕಡ್ಡಿ ಆರಮನೆ
ಬಾಗಿಲ । ಮುಂದೊಂದ ನಡಿಸು ಹಿಲಾಲು ।।೬೫।।

ಮಡಿಸೀರೆಯನೆ ಬಿಟ್ಟು । ಮಡಿಪೀತಾಂಬರವುಟ್ಟು ।
ಕಡಗಕಂಕಣ ಕೈಯಲ್ಲಿಟ್ಟು ದೃಢವಾದ ಮುತ್ತಿನ
ಮುಖದೊಳಂದಡ್ಡಿಕೆಬು । ಗುಡಿಬಾವುಲಿ ಹೊಳೆಯುತಲಿ ।।೬೬।।

ಕಂಚುಕ ಕಲಶ ಕದಳಾರತಿ ತಕ್ಕೊಂಡು । ಮುಂಚೆ
ಬಂದಿರುಗೊಂಡೆನ್ನ ।। ಮಿಂಚಿನಂತೊಳೆವ ಚಿನ್ನದ
ಹಲಿಗೆ ತೂಗೋಮಂಚದಿ ಬಂದು ಕೂಡ್ರುವೆನು ।।೬೭।।

ಆರಮನೆಯಲ್ಲಿ ಸಾವಿರವು ಮೂರಂಕಾಣ । ಮನೆಮುಂದೆ
ಮುರುಕು ಚಪ್ಪರವೂ ।। ಮರದ ಮಣೆ ನಮ್ಮಲ್ಲಿರುವುದೇ
ಹಲಗೆಯ ತೂಗುಮಂಚೆಲ್ಲಿ ತರುವೆನು ।।೬೮।।

ಬಂಗಾರದ ಬಾಳೆಯಲೆ ಬೆಳ್ಳಿಬಟ್ಟಲು । ಮಂಡಿಗೆ
ತುಪ್ಪ ಸಕ್ಕರೆಯು ।। ಉಂಡು ಕೂಡ್ರುವನೆ ಕುಂದಣ
ಕೆತ್ತಿದ ತಬುಕೇಳಿ । ತಂದು ನೀಡೆನಗೆ ತಾಂಬೂಲ ।।೬೯।।

ಹಚ್ಚಿದ ಮೇಲೆ ಈ ಚುಟ್ಟ ಲೇಲೆಸುಣ್ಣ ।
ಹಚ್ಚಿಕೊಂಡರೆ ನಾನರಿಯೆ ಕರ್ಪೂರದ ಅಡಿಕೆ
ಮುತ್ತಿನ ಸುಣ್ಣ ಬಿಲಿಯೆಲೆ ಹಚ್ಚಿ ನೀ ಮಡಚಕೊಡೆನಗೆ ।।೭೦।।

CC-O. In Public Domain. Digitized by eGangotri

ಬಂಗಾರವೆಂಬುದು ನಮ್ಮ ಕಂಗಳು ಕಂಡಿಲ್ಲ
ಮಂಗಳಸೂತ್ರದೊಂದೊರೆತು ।। ಕುಂದಣದ ತಬಲಕ್ಕಿವಡೆಕೊಂಡು
ಹೆತ್ತಾಳೆ ತುಂಡಾದ ತಾಟೊಂದಿರುವುದು ।।೭೧।।

ಮಡಿಸೀರೆಬಟ್ಟರಿನ್ನೊಂದು ಸೀರೆಯೆನಗಿಲ್ಲ ।
ಮಡಿಪೀತಾಂಬರವೇ ಕಂಡಿಲ್ಲ । ಕಡಗಕಂಕಣವಿಲ್ಲ
ಕರಿಯಗಾಜಿನ ಬಳೆ । ಇರಲು ಮನೆ ಮಠ ನಮಗೆ ।।೭೨।।

ಬುಟ್ಟಿದ ಬುಗಡಿ ಅಂಚು ಜರತಾರಿ । ಚಿನ್ನದ
ಥಳಕಿರುವ । ಕುಪ್ಪಸ ಹೊಲಸಿ ಕೊಟ್ಟರೆ ಒಂದರೆಕ್ಷಣ ।
ತೊಟ್ಟು ನಿಮಗೆ ಕೊಟ್ಟು ಬಿಡುವೆ ।।೭೩।।

ಹುಟ್ಟು ಬಡವರು ನಾವಷ್ಟದರಿದ್ರರು । ನಿತ್ಯ
ಯಾತ್ರೆಯಲಿ ಬದುಕುವವರು ।। ಚಿತ್ತಕ್ಕೆ ತಂದು ನೀ
ದಯಮಾಡಿ ಬರುವದೆಂದ್ಪಸ್ತಮುಗಿದು ಹೇಳಿವಳೂ ।।೭೪।।

ಮತ್ತೆ ಮಹಾಲಕ್ಷ್ಮೀ ಪಚ್ಚಕರ್ಪೂರ ಪುನಗಿನ । ಎಣ್ಣೆ
ಸಂಪಿಗೆಯ ತೈಲ ।। ಕಸ್ತೂರಿ ಬೆರೆಸಿದ ಬಿಸಿನೀರು
ಅರಿಶಿನ । ಹಚ್ಚಿ ತಾನೆರಕೊಂಡಳಾಗಾ ।।೭೫।।

ಸುರುಳಿಗುರುಳಾಗಿ ಬೈ ತಲೆ ತಿದ್ದಿ ತುರುಬ್ಹಾಕಿ ।
ಚೌರಿರಾಗಟಿ ಚಂದ್ರಗೋಡ್ಯಾಗಿಳಿತಜ್ಜಿ ಹರಳ
ಭಂಗರಕೇದಿಲೆ ಮೇಲೆ । ಅರಳ ಮಲ್ಲಿಗೆ ಮಾಲೆ ಮುಡಿದು ।।೭೬।।

ಬಿಚ್ಚಿ ತಾನುಟ್ಟಳು ಬಿಳಿಯ ಪೀತಾಂಬರ । ಅಚ್ಚ
ವಜ್ರದ ಶರಗೊಂದು । ಕುತ್ತಣೆ ಕುಪ್ಪಸ ಮುತ್ತಿನ
ಗೋಂಡ್ಯ । ತೋಳಿಗೆ ಕಟ್ಟುತ್ತಿದ್ದರು ಬಾಜಬಂದು ।।೭೭।।

ವಜ್ರದವಂಕಿ ನಾಗಮುರಡ್ಡಿಕೆ ಕೆಜ್ಜಡ್ಡಿಕೆ ಕೊರಳಲ್ಲಿ
ದೊಡ್ಡಸರಿಗೆ ।। ಮೇಲಡ್ಡಿಕೆ ಮುತ್ತಿನ ಕೆಂಪು
ಥಳಕು ಬೆಳಕು ಹೊಳೆಯುತಲಿ ।।೭೮।।

CC-O. In Public Domain. Digitized by eGangotri

ಪುತ್ಥಳಿಸರ ಚಂದ್ರಾಹಾರ ಮೋಹನಮಾಲೆ । ಕಟ್ಟಿದಳಾಗ
ಕಂಠಿಕಟ್ಟಾಣೆ । ಪಚ್ಚ ಮಾಣಿಕ್ಯ ರತ್ನಪದಕ
ಆದರ ಮೇಲೆ ಜತ್ತಾರಿ ನಲಿದಾಡುತ್ತಿರಲು ॥೭೯॥

ಕಡಗ ಕಂಕಣ ಹತ್ತಕಡಗ ಕಮಲದ್ವಾರ್ಯ । ನಡುವಿಗೆ
ನವರತ್ನ ಪಟ್ಟಿ । ಬಿಡುಮುತ್ತು ಬಿಗಿದೊಜ್ರವಾಲೆ
ಬುಗುಡಿ ಚಂದ್ರಮರವು ಮುತ್ತಿನಸರಪಳಿಯ ॥೮೦॥

ಸಾಲುಕುಂದಣದಾಣೆ ಮುತ್ತಿನಮುಖರ ಬು । ಲಾಕು
ಬಾಲಕದೊಜ್ರಹರಳು ॥ ತೀಡಿ ಕಾಡಿಗೆ ಹಚ್ಚಿ ತಿದ್ದಿ
ಕುಂಕುಮ ಹಚ್ಚಿ ಮೇಲೆ ಜೋಳದ ಕುಡಿಯಂತೆ ॥೮೧॥

ಪಿಲ್ಲೆ ಕಾಲುಂಗುರ ಉಲುರುಳಿ ಫೈಜನಿ
ಘಲ್ಲುಘಲ್ಲೆಂದೆಜ್ಜೆ ಇಡುತ ತಳೆನ್ನಪಾದ
ಪುತ್ಥಳಿಯಂತೆ ಚಿನ್ನದ । ಬಳ್ಳಿಯಂದದಿ ಬಳುಕುತಲಿ ॥೮೨॥

ಬೆಳ್ಳನೆ ಬಿಳ್ಳಿಯ ಮಿಳ್ಳಿ ತನ್ನ ಗುರು ಬಳ್ಳಿನಲಿ
ಹಿಡಿದಲ್ಲಾಡಿಸುತಲಿ ॥ ಗಲ್ಲು ಮಿಂಚುಗಳಂತೆ ಥಳಥಳಿಸುತ
ಬೀದಿ । ಯಲಿ ಬಂದಳು ಗಜಗಮನೆ ॥೮೩॥

ದೇವಲೋಕದಿಂದ ಇಳಿದಿಲ್ಲಿ ಬಂದಳೋ । ಹರಿಸತಿಯೇ
ಅರಸುತ್ತಲೋ । ಮೋರೆ ನೋಡಲು ಮೂರ್ಛೆ ಬರುವು
ದೋದಾರುಮುಂಗಾರಮಿಂಚುಗಳಂ ತೋರುವುದೋ ॥೮೪॥

ಇಂದ್ರನರಸಿಯೋ । ಚಂದ್ರಮನರೋಹಿಣಿಯೋ ।
ಸುಂದರ ಸೂರ್ಯನರಸಿಯೋ ಗಂಧರ್ವನರಸಿಯೋ ।
ಗಗನದಿಂದಿಳಿದಂತೆ ಗಂಗಶ್ಯಾಮಲೆ ಸೀತಾಂಗನೆಯೋ । ॥೮೫॥

ರತಿಯೋ ರೇವತಿಯೋ ಅರುಂಧತಿಯೋ ಪಾರ್ವತಿಯೋ ।
ಭಾರತಿ ಭಾಗ್ಯವಂತ ಸರಸ್ವತಿಯೋ ॥ ಪತಿಗಳ್ಕೈವರ
ಪಾಂಡವರರಸಿಯೋ ದ್ರೌಪದಿ ಬಂದಳಿಲ್ಲಿಗೆಂಬುವರು ॥ ॥೮೬॥

CC-O. In Public Domain. Digitized by eGangotri

ಸತ್ಯಭಾಮೆಯೋ ರುಕ್ಮಿಣಿ ಜಾಂಬವತಿಯೋ ।
ಅಷ್ಟಮಸ್ತ್ರೀಯರೊಳಗೆ ಈಕೆ ಯಾರೋ ಶ್ರೇಷ್ಠ
ವೈಕುಂಠಕೋಲ್ಹಾಪುರ ಮಹಾಲಕ್ಷ್ಮಿ ಬಿಟ್ಟಿಲ್ಲಿ ಬಂದವಳೆಂಬುವರು ॥೮೭॥

ಹಸ್ತಮುಗಿದರು ಸಾಷ್ಟಾಂಗವೆರಗುವರು । ಇತ್ತ ಬಾ
ಎನುತ ಕರೆಯುವರು । ಈ ಹೊತ್ತು ಸಂಪತ್ತು ಶುಕ್ರವಾರ
ಸಾಕ್ಷಾತ್‌ಲಕ್ಷ್ಮಿ ಬಂದಳಿಲ್ಲೆಂಬುವರು ॥೮೮॥

ರಾಜಾಧಿರಾಜರೆಲ್ಲರು ನಿಂತು ನೋಡಲು । ಲಾಜವರದ
ಗೊಂಬೆಯಂತೆ । ಭೋಜನಕೆತ್ತ ಪೋಗುವಳು
ನೋಡೋಣೆಂದು । ಬಹುಜನ ನಿಂತು ನೋಡುವರು ॥೮೯॥

ಮಡಿಬಾಗಿ ನಡೆಯುತ ಮಡದುದ್ದುದುರಿಸುತೆ
ಮುಗುಳು ನಗೆಯಿಂದ ನಗುತಲಿ ॥ ಎಡಬಲದಲ್ಲಿ
ದಾರಿನೋಡುತ । ನಡೆದಳು ಬಡವರಾ ಮನೆಗೆ ॥೯೦॥

ಸಿರಿದೇವಿ ತಾ ಕಣ್ಣು ತೆಗೆದು ನೋಡುತಲಿರೆ ।
ಆರಮನೆಯಾಯಿತಾಕ್ಷಣದಿ ॥ ಸುರಮಲ್ಲಿಗೇ
ಶಾವಂತಿಗೆ ನಾನಾ ಫಲಗಳು ವನವಾದವಾಮನೆಸುತ್ತ ॥೯೧॥

ಪಚ್ಚಿದಂತೋಳುವ ಶ್ರೀ ತುಳಸೀದೇವಿಯರಲ್ಲಿ ।
ಅಚ್ಚವಜ್ರದ ಗೊಂಬೆಯಂತೆ । ತಾನಲಿಯುತ ಹಿತದಿ ।
ಅರ್ಚಿತವಾದ । ಕುರ್ಚಿಯಲ್ಲಿ ಬಂದು ಕೂಡ್ರುವಳು ॥೯೨॥

ಬಡತನ ಮಡದಿಗೆ ಒಡವೆ ವಸ್ತ್ರವಾಯಿತು
ಕಡಗಕಂಕಣವು ಕೈಯಲ್ಲಿ ॥ ಮಡಿಸೀರುಟ್ಟಿದ್ದೋಗಿ
ಮಡಿಪೀತಾಂಬರವಾಯಿತು ಆಗುರವರೆದುರಂಗೊಂಬುವರು ॥೯೩॥

ಗಂಧಕುಸುಮ ಅರಸಿನು ದಿವ್ಯ ಬುಕ್ಕಿಟ್ಟು
ತಂದ್ಹಚ್ಚಿ ತಿಲಕಫಣಿಗೆ ದುಂಡುಮಲ್ಲಿಗೆಯ ಮಾಲೆ ಅಪರಿಜಾತ
ಸಂಪಿಗೆಮಾಲೆ । ದಂಡೆ ಮುಡಿಸುವರು ಜಡೆಮುಡಿಗೆ ॥೯೪॥

CC-O. In Public Domain. Digitized by eGangotri

ಕಿತ್ತಲೆಫಲವು ಕೊಬ್ಬರಿಬಟ್ಟಲೊಳು ಹೋರಿ ।
ಕೂಡದೆಹಾಕ್ಯಡಿಯ ತುಂಬುವರು ಹಿಡಿದು ಕುಂದಣ
ಪರಿವಾಣದೊಳಾಡದೆ ಪಾಡುತ ಮಾಡಿ ಮುತ್ತಿನಾರತಿಯಾ ॥೯೫॥

ಎಡಬಲದಲ್ಲಿಟ್ಟು ಮೊರವನ್ನೇ ಬೀಸುವರು ।
ಹಿಡಿದು ನೋಡುವರು ಹಿಲಾಲ ಬಿಡಿಮಲ್ಲಿಗೆ
ತಂದು ತಳಿನಾಮುಖಿಗಾಸೋರು ಸಡಗರದಿಂದೆದ್ದಳಾಗ ॥೯೬॥

ಇಂದಿರಾದೇವಿ ಆನಂದದಿಂದ ಕುಳಿತಿರೆ ।
ಇಂದ್ರಾದಿಸುರರು ನೋಡುತಲ್ಲಿ ಮುಡಿದಾರಮಲ್ಲಿಗೆ ।
ಮಳೆಯು ಕರೆದರಾಗ ದುಂದುಭಿಭೇರಿಯ ಹೊಡೆದರು ॥೯೭॥

ಲಕ್ಷ್ಮಿದೇವಿ ಪಕ್ಕನೆಬಂದಳು । ಹೊಕ್ಕಳು
ದೇವರಮನೆಯಾ ಚೊಕ್ಕ ಚಿನ್ನದ ಕೊಡನಾಗ
ತಾನಾಗಿ ತೂಗೋ ಮಾಣಿಕ್ಯ ಮಂಚದಲಿ ಕೂಡ್ರುವಳು ॥೯೮॥

ರತ್ನಮಾಣಿಕ್ಯ ನವರತ್ನದ ಹೊನ್ನು ಹಣವು । ಚೊಕ್ಕ
ಚಿನ್ನದ ಮೂರುಹಾರುಗಳು ಬಣ್ಣದವಳ ಮುತ್ತು ಭಾರಿ
ಬಂಗಾರ । ಮಂದಿ ಬಿಂದಿಗೆ ನೋಡುತಿಹರು ॥೯೯॥

ಶುಕ್ರವಾರವೇ ಶುಭಕಾಲ ಇವರಿಗೆ । ಸಿಕ್ಕಳು
ಸಿಂಧುನಂದನೆಯು ॥ ಲೋಕಸ್ಥ ಭಾಗ್ಯ
ಭಂಡಾರ ಜಯಲಕ್ಷ್ಮಿ । ಸಿಕ್ಕಿದಳಿವರಿಗೆಂಬುವರು ॥೧೦೦॥

ನಾಲ್ಕು ವಾರದ ಎಲೆತೆಗೆದು ನೋಡುತಲಿರೆ ಹಾಕಿದನ್ನವು
ಅಣಿಮುತ್ತು ॥ ಪಾಕಪಾಳ್ಯವು ಪಚ್ಚೆ ಪರಮಾನ್ನವು
ಬಂಗಾರ ತರ್ಜಿತ ಬಾಳೆಯೆಲೆಯೂ ॥೧೦೧॥

ಬಂದು ನೋಡಿದರೆ ನಾಲ್ಕು ಮಂದಿ ಸೊಸೆಯಾರ್ಹಂಚಿ
ಕೊಂಡು ತಲಾಗೊಂದೊಂದೆಲೆಯ । ಹಿಂದೆ ಮಾಡಿದ ಪುಣ್ಯ
ಬಂದೊದಗಿತು ನಮಗೆಂದು ಸಂತೋಷಪಡುವರು ॥೧೦೨॥

CC-O. In Public Domain. Digitized by eGangotri

ಕರ್ಪೂರದಾರತಿ ಮಾಡಿ ಕಾಯಿ ಒಡೆದು ಬುಕ್ಕಿಟ್ಟು
ಕುಂಕುಮ ಹಚ್ಚುವರು ।। ಪಟ್ಟಣದ ಜನರು ಪತ್ತಲು .
ಸೀರೆ ಕುಪ್ಪಸ ಲಕ್ಷ್ಮಿಗುಡುಗೊರೆ ಕೊಡುವರು ।।೧೦೩।।

ಬಡವರ ಮನೆಗೆ ನಡೆದು ಬಂದ ಭಾಗ್ಯವು । ಕೊಡುವಾಗ
ಕುತಂಥ ಕಥೆಯೂ ದೃಢಭಕ್ತೀಲಿಂದ್ಹೇಳಿ ಕೇಳಿದ
ಜನರಿಗೆ ಸಾಯುಜ್ಯ ಪದವಿ ಕೊಡುವಳು ।।೧೦೪।।

ಮುದದಿಂದ ಮೂರ್ಜಗದೊಡೆಯ ನಾರಾಯಣನ ।
ಎಡೆಯಲ್ಲಿರುವ ವರಲಕ್ಷ್ಮೀ ನಮ್ಮ ಸದನಕ್ಕೆ ।। ಬಂದು
ಸಂಪತ್ತು ಶುಕ್ರವಾರ ಸಮದೃಷ್ಟಿಯಿಂ ನೋಡಿದಳು ।।೧೦೫।।

ಗಂಡಹೆಂಡಿರು ಬ್ರಾಹ್ಮಣರೊಡಗೂಡಿ ।
ಉಂಡುವೀಳ್ಯವನೆ ತಕ್ಕೊಂಡು ಮಂದಗಮನೆ ಲಕ್ಷ್ಮೀ
ಮಹಿಮೇ ಕೊಂಡಾಡುತಾ । ಆನಂದರಾಗಿರುತಿದ್ದರವರು ।।೧೦೬।।

ಕಿವುಡಾಗೆ ಕಿವಿ ಕುರುಡಾಗೆ ಕಣ್ಣು ಬರುವುದು ।
ಬರಡಾಕಳ್ಳೆನವಾಗುವುದು ।. ಹಡೆಯದ ಬಂಜೆ ಹೊಟ್ಟೆಯಲಿ
ಮಕ್ಕಳಾಗುವುದು । ಪಡೆದರವರು ಇಷ್ಟಫಲಗಳಾ ।।೧೦೭।।

ದನಕರು ತಳಿಯಾಗಿ ಧನಧಾನ್ಯ ಬೆಳೆಯಾಗಿ ।
ಅನುಗಾಲ ಶುಭಕಾರ್ಯವಾಗಿ ಬರಿಕುಂಕುಮರಿಸಿನ
ಮಾಂಗಲ್ಯಮುತ್ತೈದೆ । ತನದವಳಾಗಿ ಕೊಡುವಳು ।।೧೦೮।।

ಸಾಮಜವರದ ಸುಧಾಮಸಖನಾದ । ಸ್ವಾಮಿ
ಶ್ರೀ ಹರಿ ಮೋಹದ ಸತಿ ।। ಶ್ರೀ ಮಹಾಲಕ್ಷ್ಮೀಪೂಜೆಯ
ಮಾಡಿದವರಿಗೆ ಭೀಮೇಶಕೃಷ್ಣ ತಾನೋಲಿವಾ ।।೧೦೯।।

ಐದು ಶುಕ್ರವಾರದ ಹಾಡು ಸಂಪೂರ್ಣವು

CC-O. In Public Domain. Digitized by eGangotri

ಶ್ರೀರಸ್ತು

ಶುಕ್ರವಾರದ ಗೌರೀ ಹಾಡು

(ಶ್ರಾವಣದ ಶುಕ್ರವಾರ)

ಶುಕ್ಲಾಂಬರಧರಂ ವಿಷ್ಣು ಶಶಿವರ್ಣಂ ಚತುರ್ಭುಜಂ।
ಪ್ರಸನ್ನವದನಂ ಧ್ಯಾಯೇತ್ಸರ್ವವಿಘ್ನೋಪಶಾಂತಯೇ ।।

ರುದ್ರಕುಮಾರನ ಚರಣಕ್ಕೊಂದನೆಮಾಡಿ । ವಿದ್ಯಾಭಿಮಾನಿ ವಾಣಿಯನು ।।
ಪಾದಪದ್ಮಂಗಳಿಗೆರಿಗಿ ನಾ ಪೇಳುವೇ ಶುದ್ಧವಾಗಿ ಕೊಡು ಮತಿಯ ।। ೧ ।।

ಶ್ರಾವಣಮಾಸ ಶುಕ್ರವಾರ ಶುಭಮೂಹೂರ್ತಕಾಲದಿ । ಕಾಮಾಕ್ಷಿಯರಾಲಯ
ದೊಳಗಿಟ್ಟು ಭರದಿಂ ಪೂಜಿಸೆ । ಬೇಡಿದಿಷ್ಟಾರ್ಥ ನೀಡುವಳು ।। ೨ ।।

ಇರುತಿರಲೊಂದು ಪಟ್ಟಣದಲಿ ರಾಜಗೆ । ತನಯರಿಲ್ಲದ ಕಾರಣದಿ ।
ವಿವಾಹದುತ್ಸವಕೆಂದು ತೆರಳಿ । ಪತಿಯ ನೋಡಿ ತೆಗೆದಿಟ್ಟಳಾತನಾಯುಧವ।।೩।।

ಪಟ್ಟದಾ ಕತ್ತಿಯು ಬಿಟ್ಟು ಬಂದೆನೆಂದು ಅಟ್ಟಿದ ತನ್ನಯ ದೂತರನು ।।
ನೆಟ್ಟನೆರಡು ಕಾಲುಚಾಚಿ ತಾ ಕುಲಿತರೆ ತಟ್ಟನೆ ದಾಟಿ ನಡೆದನು ।। ೪ ।।

ಮೂರುತಿಂಗಳು ಗರ್ಭವಾಗುತ ಬಂದಿತು । ನೀಯನ್ನ ಕಾಲ ದಾಟುವರೆ ।।
ಕೇಳಿ ಸಂಭ್ರಮದಿಂದ ಹೇಳಿ ರಾಜಗೆ ಹೋಗಿತಾಳಿದ ಪರಮಹರುಷವನು ।। ೫ ।।

ಅಂಗನೆಗೆ ಗರ್ಭಾ ಚಂದಾದಿಂದೊದಗಿತೆಂದೂ ವಾರ್ತೆಯನೆ ಕೇಳುತಲಿ ।।
ಬಂದ ದಿಬ್ಬಣದವರ ಹಿಂದಕ್ಕೆ ತಿರುಗಿಸಿ ಬಂದಿಳಿದನು ಅರಸು ಮಂದಿರಕೆ।। ೬ ।।

ಅರಸನು ಅರಸಿಗೆ ಬೆರೆಸೀತು ಚಿಂತೆಯು । ಕರೆಸಿದಳಾ ತನ್ನ ದಾಸಿಯರ
ಕರೆದುತಾರೆ ಸೂಲಗಿತ್ತಿಯಯೆನುತಲಿ । ತ್ವರಿತದಿಂ ಕಳುಹಿದಳು ।। ೭ ।।

ಸದ್ದು ಮಾಡದೆ ಸೂಲಗಿತ್ತಿಯ ಕರೆಸಿತಾ । ನಿದ್ದ ವಾರ್ತೆಗಳ ಪೇಳಿದಳು ।।
ಮುದ್ದು ಕೂಸಿನ ತಂದುಕೊಟ್ಟರೆ ನಿನಗೀಗ ಮತ್ತೋಲತುಂಬೋನ್ನಕೊಡುವೆ।।೮।।

ಎಂದಾ ಮಾತಿಗೆ ಸಂದೇಹಬೇಡಿರಿ ಕಂದಾನ ತಂದು ಕೊಡುವೆನೆನಲು ।।
ಹಾಗೆಂದು ಕೇರಿಕೇರಿ ಮಂದಿರವನೆಪೊಕ್ಕು ಚೆಂದಾದಿ ಹುಡುಕಿ ನೋಡಿದಳು।।೯।।

ಹುಡುಕುತ್ತಾ ಬಂದಳು ಕಡೆಯ ಬಜಾರಕ್ಕೆ ।। ಬಡಬ್ರಾಹ್ಮಣನ ಮಂದಿರದಿ
ಮಡದಿಗೆ ಮೂರು ತಿಂಗಳು ಗರ್ಭವಾಗಿರೆ । ನುಡಿಸಿ ಮಾತನಾಡಿಸಿದಳು ।।೧೦।।

CC-O. In Public Domain. Digitized by eGangotri

ಪಡೆದ ಅತ್ತಿಮಾವ ಭಾವಮೈದಂದಿರು ಒಡನೆ ಸಂತೈಸುವಲ್ಲಿ ।। ಹಡೆದ
ತಾಯ್ತಂದೆಯರೂ ಇಲ್ಲವೆಂದು ಕಡೆ ಹಾಯಿಸಲೆನ್ನ ಕರೆಸೆಂದಳು ।।೧೧।।

ಅಲ್ಲಿಯ ಸುದ್ದಿಯ ಮೆಲ್ಲನೆ ತಿಳಿದು ।। ರಾಜನೊಲ್ಲಭಿಗಾಗ ಆರುಹಿದಳು ।।
ನಿಮ್ಮಲ್ಲಿ ಆಗುವ ಉತ್ಸವ ಕಾರ್ಯಗಳನ್ನು । ಉಲ್ಲಾಸದಿಂದ ನಡೆಸೆಂದಳು ।।೧೨।।

ಮೂರು ತಿಂಗಳಿಗೆ ರಾಜನರಸೀಗೆ ಮೊಗ್ಗೆಯ । ಏಳು ತಿಂಗಳಿಗೆ ಹುವ್ವ ಮುಡಿಸಿ
ಎಂಟು ತಿಂಗಳಿಗೆ ಸೀಮಂತಾದ್ಯುತ್ಸವಮಾಡೆ ಬಂತಾಗ ನವಮಾಸಗಳು ।।೧೩।।

ವಿಪ್ರಾನ ಮಡದೀಗೆ ವತ್ತಿ ಬಂದೀತು ಬೇನೆ । ವರ್ತಮಾನವನೇ ಕೇಳುತ್ತಲೀ ।।
ಆರಿಸಿಗೆ ಕಟ್ಟಿದಾತನ ಹತ್ತಿತು ಬೇನೆ ಎಂಬುವರು ।।೧೪।।

ಆರ್ತಿಯಿಂದಲೆ ಬರುವಾಗ ಸಂಗಡಲೊಂದು ಪುತ್ರನ ಕರೆದುಕೊಂಡಿಹಳು ।।
ಕರ್ಪೂರದ ಕೈಗಳಲ್ಲಿ ಕೊಟ್ಟು ಹೆಚ್ಚಪಕಾರವನು ಮಾಡುವಳು ।।೧೫।।

ವಿಪ್ರನ ಮಡದಿಗೆ ವತ್ತಿ ಬಂದೀತು ಬೇನೆ । ಕಟ್ಟಿ ಕಣ್ಣುಗಳ ನಿಚ್ಚಣಿಕೆ ।।
ಹತ್ತಿಳಿಯುತ ಹಡದಾಳುಗಂಡುಕುವರನ । ಎತ್ತಿಕೊಂಡೋದರಾಕ್ಷಣದಿ ।।೧೬।।

ಕಲ್ಲುಗುಂಡನು ಹಡದಿನೀ । ಎಂಬಂತೆ ಸೊಲ್ಲು ಕೇಳುತ್ತ ತಲ್ಲಣಿಸಿ । ಎಲ್ಲಿದ್ದ
ರೆನ್ನ ಕುಮಾರ ಸುಖದಿ ಬಾಳಲಿ । ಇಂತೆಲ್ಲಿ ನೇಮವ ನಡೆಸಿದಳು ।।೧೭।।

ಇತ್ತಕೂಸಿಗೆ ಮನವಿತ್ತು ಜಾತಕ ಬರೆಸಿ । ಸಕ್ಕರೆಶಕಟದಿಂದ ।। ದಕ್ಷಿಣೆತಾಂಬೂಲ
ಬ್ರಾಹ್ಮಣರಿಗೆಲ್ಲ । ಇಚ್ಛಾಭೋಜನ ಮಾಡಿಸಿ ।।೧೮।।

ಮಾರನೆ ದಿನದಲ್ಲಿ ಕೊಯಿಲು ಪೂಜೆಯಮಾಡಿ । ಐದನೆದಿನ ಚವುತಿಪೂಜೆ।।
ಹತ್ತನೇದಿನದಲ್ಲಿ ಅಂಚಿ ಕಡಬನೆಮಾಡಿ । ಹನ್ನೊಂದನೆಯದಿವಸ ಈ ರಲವು

ನೀರಾನೆರೆದ ಸಾರಾವಳಿಯ ಹಾಸಿ । ದೇವರ ಮುಂದಿರಿಸಿದರು ।। ನಾರಿಯರೆಲ್ಲ
ಸಾಂಬ್ರಾಣಿಯಹೊಗೆ ಕೊಟ್ಟು ಆರತಿಗಳನೆತ್ತುವರು ।।೨೦।।

ಜೋ ಜೋ ಜೋ ಲಕ್ಷ್ಮೀಯಪುತ್ರಾ ।। ಜೋ ಜೋ ಜೋ ಪರಮಪವಿತ್ರ
ಜೋ ಜೋ ।।೨೧।।

ಚಿನ್ನಾದ ತೊಟ್ಟಿಲಿಗೆ ರನ್ನಾದ ಗೋಲಸೂ । ಕನ್ನಡಿ ಹೋಲುವ ಮೇಲ್ಕಟ್ಟಿನ
ಬೆಳಕು ಇನ್ನಾದರೂ ಬಾರದೆ । ನಿನ್ನ ಮನಸು । ಕನ್ನೆರೂಗಾರು ಲಕ್ಷ್ಮೀಪುತ್ರ
ಪವಡಿಸು ಜೋ ಜೋ ।।೨೨।।

CC-0. In Public Domain. Digitized by eGangotri
ನಾಮಕರಣ ಚೂಡಕರ್ಮಾದಿಗಳನ್ನು ಪ್ರೀತಿಪೂರ್ವಕವಾಗಿ ಮಾಡಿಸಿ ।।

ಸೋಮನಂತೆ ಹೊರಗೊರಟು । ತಮ್ಮಮ್ಮನ ನೋಡಿಮೋಹಿಸಿದನಾಕ್ಷಣದಿ
ಕತ್ತಲೊಳಗೆ ಬರುತಿರಲುಬಾಗಿಲಮುಂದೆ ಕಟ್ಟಿದ ಗೋವು ಕಾಣದಲೆ ವತ್ಸನು
ಕಾಲು ತುಳಿಯಲಾಗ ಅದುಬಾಯಿ ಬಿಚ್ಚೊದರಿತುಭಯದಿಂದ ।।೨೪।।

ಅಮ್ಮನೀ ಬಾರೇ ತಮ್ಮಮ್ಮಾನರಿಯಾದವ । ನಮ್ಮನ್ನು ಬಲ್ಲನೆ ಪಾಪಿ ।।
ಯೊಮ್ಮೆವಯೆರಡು ಬಾರ್ಯಾಲಿಸ್ಯಾದುಮಾತು । ತಮ್ಮಿಗ್ಹೊರೆಯನೆ ಕೇಳಿದನೆ

ಮಂದಾಕಿನಿಯಸ್ನಾನಮಾಡಿ ಬಂದಾರೆ ಸಂದೇಹ ಪರಿಹಾರವಾಗುವದು ।।೨೫।।
ಹಾಗೆಂದು ಹೇಳಿದ ಹಿರಿಯರ ವಾಕ್ಯವ ಕೇಳಿ । ಗಂಗಾಯಾತ್ರೆಗೆ ತೆರಳಿದನು।।೨೬।।

ನಡೆದುಬಂದನೆರಡು ಮಾರ್ಗದಿ । ಪಟ್ಟಾಣಹಡದ ಬಾಗಿಲ ಮನೆಮುಂದೆ ।
ಕೊಡಬೇಕು ನಮಗಿಷ್ಟು ಸ್ಥಳವನೆಂದೆನುತ ನುಡಿದು ಪವಳಿಸಿದನಾಕ್ಷಣದಿ।।೨೭।।

ಬಾಣಂತಿ ತಾಯಿನ್ನುಡಿದಳೆ ಬಂದ ಮಾತನು ।। ಆರಣೆದಿನ ನಮ್ಮಲ್ಲಿ ಆದರೆ
ತಮ್ಮಯ್ಯ ಯಾರ ಪುಣ್ಯದಲ್ಲಿಂದ ಈಗೆನ್ನ ಶಿಶುವು ಬದುಕೆ ।।೨೮।।

ಹೊರಗಿನಿಂದ ಶೆಟವಿ ಬಂದಳು ಮಹಾಲಕುಮಿ । ಒಳಗಿನೀಂದ ನುಡಿದಳೆಯೆನ್ನ
ವರಪುತ್ರಾ ಅವನದಾಟದಲಿ ನಿನ್ನ ಶಿರವು ಸಿಡಿದು ಸಹಸ್ರೋಳಾಗುವುದು ।।೨೯।।

ಅದಕೇಳಿ ಶಟವೀ ತಿರುಗಿ ಹೋಗುತಿರೆ ಬದಿಯಲ್ಲಿ ಬದುಕಿದ್ದ ಶಿಶುವು ಇದು ನಿನ
ಪುಣ್ಯದಿಂದುಳಿದೀತೆಂದೆನುತಿರೆ ಅಧಿಕ ಸಂತೋಷವಾಗಿ ಹೊರಟ ।।೩೦।।

ಭಾಗೀರಥಿಯ ಸ್ನಾನದ ಮಾಡಿಕೊಂಡು ಪ್ರಯಾಣಕ್ಕಾಗಿ ನಡೆತರಲು
ಆಗ ಮಾಡಿದ ದಾನಧರ್ಮ ಕಾರ್ಯಂಗಳು । ತಾನಾಗಕಂಡನು ಚತುರ್ಹಸ್ತ ।।೩೧।।

ನಾಲ್ಕು ಹಸ್ತಂಗಳು ಕಂಡ ಕಾರಣವೇನು । ವ್ಯಾಕುಲದಿಂದ ಕೇಳಿದನು
ಸಾಕಿದವರು ಹಡೆದವರುಂಟು ನಿಮಗೆಂದು ವಿವೇಕವಿದ್ದವರು ಹೇಳಿದರು।।೩೨।।

ಜನನಿಜನಕ ಪಾಲಕರಿವರೆಂಬಂಥ । ಕಾಂಬೋಕಾರಣ ಹೇಳಿರೆಂದು ಪಟ್ಟಾಣಕೆ
ಹೋಗಿ ಶ್ರಾವಣದ ತಿಂಗಳು । ನೇಮಾದಿ ಸಂತರ್ಪಣೆ ಮಾಡೆಂದರು ।।೩೩।।

ಪಟ್ಟಣದೊಳಗುಳ್ಳ ವಿಪ್ರಜನರು ಮತ್ತೆ ಮತ್ತೆ ಮಡದಿ ಪುತ್ರರು ಸಹಿತಾಗಿ ।।
ಅಪ್ಪಗೌರಿಗೌತಣಕೊಟ್ಟು ಉತ್ಸಾಹದಿಂದ ಇಚ್ಛಾಭೋಜನಮಾಡಿಸೆಂದರು।।
ಹಾಗಲಂದರದೊಳು ಮೂರುಕಾಲಿನಮಣೆ । ಶುಭನಾರೇರ ಕಾಲತೊಳೆಯುತಲಿ
ಹಸುರುಬಳೆಯನಿಟ್ಟು ಪಟ್ಟೇ ಪೀತಾಂಬರ ಕುಪ್ಪಸಸಹಿತ ಕೊಡೆಂದರು ।।೩೪।।

CC-O. In Public Domain. Digitized by eGangotri

ಸಾಲುಪಂಕ್ತಿಯಲ್ಲಿ ಕುಳ್ಳಿರಿಸಿ ಕುಂಕುಮ ಕೊಟ್ಟು ಕೂಡಿಬಾಳೆಯೆಲೆ
ಯನ್ಹಾಕುತಲಿ ಶಾಕಪರಮಾನ್ನವು ಹೊಸ । ಮೊರದಲಿ ಅನ್ನಸಾರು ಮೊಗೀಲಿ
ಬಡಿಸೆಂದರು ॥೩೫॥

ಸಾಲುಪಂಕ್ತಿಯಲಿ ಕುಳ್ಳಿರಿಸಿ । ಕುಂಕುಮಕೊಟ್ಟು ಆದರಂದಿಂದಲಿ ನೋಡುತಲಿ
ವಿಶಿಷ್ಟ ಬ್ರಾಹ್ಮಣರಿಗೆ । ಶ್ರೀಕೃಷ್ಣಗರ್ಪಿತವೆಂದು । ತುಪ್ಪ ನೀನೆ ಬಡಿಸೆಂದರು॥೩೬॥

ಜ್ಞಾನಿಗಳಾಡಿದ ಪ್ರೇಮದಾನುಡಿಯನ್ನು ಆದರದಿಂದ ಕೇಳುತಲೀ ಭಾಗೀರಥಿಯ
ತುಂಬಿ ॥ ಕಾವಡಿ ಪೊತ್ತು ಬಂಧುಗಳಿದ್ದ ಪಟ್ಟಣಕ್ಕೆ ॥೩೭॥

ಗೊತ್ತೀಲಿ ಬಂದಾನು । ಪಟ್ಟಾಣದೊಳಗೊಂದು । ಹತ್ತಾರುದಿನದ
ಮಂದಿರದಿ ಹೊಸ್ತಲೊರಗೆ ಆಡ್ದ ಮಲಗಿದ್ದ ಕಾಲಕೆ । ಮತ್ತಾಗ ಬಂದಾಳಾ
ಶೆಟವಿ ॥೩೮॥

ಚೊಚ್ಚೀಲ ಮಗನಾಟದಲ್ಲಿ ನಿನ್ನ । ಶಿರವು ಬಿಚ್ಚಿ ಸಾಸ್ರೋಳಾಗುವುದು ॥
ಲಕ್ಷ್ಮಿಮಾತಿಗೆ ತೆರಳಿದಳೆಂದು ತುತ್ತೀಗೆ ॥ ಮರ್ತ್ಯದ ಪಾಪಿಯೆಂದೆನುತ ॥೩೯॥

ಸತ್ಯವಂತನೇ ನಿನ್ನ ಪುಣ್ಯದಿಂದಿಬ್ಬರು । ಪುತ್ರಾರು ಉಳಿದರೆಂದಳು
ಅರ್ಥಿಯಿಂದಲಿ ವರವಾಕ್ಯವ ಕೇಳುತವ । ತನ್ನ ಪಟ್ಟಣಕ್ಕೆ ನಡೆತಂದ ॥೪೦॥

ಗಂಗಾಸ್ನಾನವ ಮಾಡಿಕೊಂಡು । ಕಾವಡಿ ಪೊತ್ತುಬಂದ ಶ್ರಾವಣಮಾಸದಲಿ।
ಅಂದಿನಾರಭ್ಯ ಬ್ರಾಹ್ಮಣರಿಗೆ ಮೃಷ್ಟಾನ್ನ । ಕುಂಭ ಭೋಜನಮಾಡಿಸಿದ ॥೪೧॥

ನಿತ್ಯ ನಿತ್ಯದಿ ಭಕ್ಷ್ಯ ತುಪ್ಪ ಮಂಡಿಗೆ ಕ್ಷೀರ । ಸಕ್ಕರೆ ಸೂರೆ ಮಾಡುತಲಿ ।
ಗೊತ್ತಾಗದೆಂದ ಕಾರ್ಯಗಳು ಪಟ್ಟಣದಲಿ । ಮತ್ತಾರುಳಿದವರೆಂದ ।
ಪಟ್ಟಣದೊಳು ಬಡಬ್ರಾಹ್ಮಣನರಸಿಯು ॥೪೨॥

ನಿಷ್ಠೇಲಿ ವತ್ರದಲ್ಲಿರುವಳು ಎಷ್ಟು ಕರೆದರೆ ಬರಳಾಕೆ ಶ್ರೀಗೌರಿಯ ಲಕ್ಷ್ಮೀ
ದೇವಿಯ ಪೂಜೆಯಂತೆ । ನಾನೆ ಬರಲೊ ತನ್ನ ಮಂದಿರಕಾದರೆ । ತಾನೆ
ಬರುವಳೋ ನಮ್ಮ ಮನೆಗೆ ॥೪೩॥

ಮಾಡಿದಪ್ಪಣೆಗೆ ಜುಲಮಾನವ ಕೊಡವಳೋ ಕೇಳಿಬನ್ನಿರೆಂದು ಕಳುಹಿಸಿದನು।
ಇಷ್ಟು ಛಲಗಳೇಕೆ ಈಗ ಬರುವೆನೆಂದು ಲಕ್ಷ್ಮೀದೇವಿಯ ಪೂಜೆಮಾಡಿ
ಭಕ್ತಿಯಿಂದಾರತಿ ಮುಷ್ಟಕ್ಕಿಯನೆ ಹೂಡಿ । ಕಟ್ಟಬಂದಳೆ ಭಾಗ್ಯಶಾಲಿ ॥೪೫॥

CC-O. In Public Domain. Digitized by eGangotri
ಬರುತ್ತಿರಲಾಗ ಅಂಗನೆ ಅರಮನೆ ಮುಂದೆ ಹಡಿಕ್ಕೆ ಕಚ್ಚಿನ । ಕೊಡು
ಸ್ಥಿರವಾಗಲೆನ್ನ ಕುಮಾರನಿಗೆ ಆಯುಷ್ಯಗಳು ಬದಲು ಮಾರ್ಗದಿ ನಡೆದಳು।।೪೬।।

ಮೂರುಕಾಲಿನ ಮಣೆಮುಂದೆ । ತಂದಿಟ್ಟರು ಕೂಡಲಾಗದು ನಮ್ಮ ವ್ರತವು
ಹಾಲಂದರಿ ಹೋಗಿಲಸನು ಬಳೆಯಬಿಟ್ಟು । ನೀರಟ್ಟಿದಳು ಕರದಲ್ಲಿ ।।೪೭।।

ಹಸಿರು ಪೀತಾಂಬರ ಹಸನಾದ ಕುಡಿಯಲಿ । ಹೊಸಮರದೊಳಗೆ ಅನ್ನವನು ।।
ಬಿಸಿಬಿಸಿಸಾರು ಮಾಗೆಯಲಿ ತಂದು ಬಡಿಸಲು ಶಶಿಮುಖಿ ಅದುವಲ್ಲೇನೆನುತ

ತಂದು ಕೆಂಪಿನ ಪೀತಾಂಬರ ಮುಡು ಕೊಟ್ಟು । ಬಂದವಾಲೆದೆನಾನ್ಹಾಕಿದರು
ಬಂಗಾರದರಿವಾಣದೊಳಗೆ ಅನ್ನವ ಬೆಳ್ಳಿ । ತಂಬುಗೆಲಿ ಸಾರುಬಡಿಸೆ ।।೫೦।।

ಬಡವನಾ ಮಡದೀಯ ಬಡಿವಾರ ನೋಡಿರೇ ಸಡಗರ ಬಂತೇನೀಹೊತ್ತು।।
ಪಡೆದಾಳುಅರಸಿನಐಶ್ವರ್ಯಯೆನುತಾಲಿ । ನುಡಿದು ಹಾಸ್ಯವನೆ ಮಾಡಿದರು।।೫೧।।

ಉಟ್ಟ ಪೀತಾಂಬರ ಕಟ್ಟಿದ್ದ ಉಡಿದಾರ ರತ್ನದ ಕಡಗೆ ಕೈಯಲ್ಲಿ ಪಟ್ಟಾದ
ಪದಕ ಮುತ್ತಿನ ಕಂಠಿ ಕೊರಳಲಿ ಪತ್ತಳಿಸರ ಹೊಳೆಯುತಲಿ ।।೫೨।।

ನೀಲಮಾಣಿಕ್ಯದೋಜ್ರದುಂಗುರವನಿಟ್ಟು । ಅಣಿಮುತ್ತಿಟ್ಟು ಕಿವಿಯಲಿ
ತಾಳಿಯ ಮುಗಿದ ಬ್ರಾಹ್ಮಣರಿಗೆ । ಭೋಜನಕುಪಚಾರ ಹೇಳುತಲೆ ತಾ ಬಂದು
ದೊರೆಯು ತುಪ್ಪದ ಬಡಿಸುತ್ತಾ ।। ಸಾಲೆಡೆಯಲ್ಲಿ ಬರುತಿರೆ ತಾಯಿ ಸ್ತನಗಳು
ಭರದಿಂದುಕ್ಕೇರಿತುಂಬಿತು ಕ್ಷೀರಮುಖದಲ್ಲಿ । ತೊರೆದುಚಿಮ್ಮಿದವಾ ಕ್ಷಣದಿ।।೫೪।।

ಪಾಲುಬಿದ್ದರೆ ತನ್ನ ಶಾಲಿನಿಂದ್ಹೊರಸುತ್ತ । ಮಹಲಿನ ಮೇಲೆ ನಡೆದಾನು।।
ಅಲಯಕುವರಾನು ಬಿಡದಂತಪ್ಪಣೆಮಾಡಿತಾ ಮಲಗಿದ ಮಂಚದಲಿ ।।೫೫।।

ಹುಟ್ಟು ಬಡವೀಯ ದೌಲತ್ತಾನೆ ನೋಡಿರೆ । ಉಟ್ಟಾಳು ಪೀತಾಂಬರ
ಘಟ್ಟ್ಯಾಗಿ ಶೆರೆಗೊದಿಯಾದೆ ತನ್ನ ಮಾನಬಿಟ್ಟಾಳೆಂದಾಡಿಕೊಂಬುವರು ।।೫೬।।

ಎತ್ತನೋಡಿದರಿಲ್ಲ ಚಿತ್ತ ಚಂಚಲವಾಗಿ ಮತ್ತಲ್ಲಿ ಮಗನ ಕಾಣದೆ ಹತ್ತಿ ।
ಬಂದಳು ಮಾಲಿದೊಳಗೆ ಮಂಚಾದಲ್ಲಿ ಮಲಗಿರುವನನ್ನ ಕಂಡಳಾಗ ।।೫೭।।

ಏನು ಕಾರಣ ಮಲಗಿದಿ ಮಾತನಾಡೆಂದು । ಲಾಲಿಸಿ ಮಗನ ಮುದ್ದಿಸುತ
ಬಾಲಕ ನೀನಿಷ್ಟು ಬಳಲುವುದೇಕೆಂದು । ಕೇಳಿದಳತಿ ಮೋಹದಿಂದ ।।೫೮।।

ಹಡೆದವರಾರು ಎನ್ನೊಡನೆ ನೀ ಪೇಳೆಂದು । ಕಡುಭಯಬೇಡವೆಂದೆನುತ ।
ಪಡೆಯಲಿಲ್ಲವೋ ಎನ್ನ ಮೇಲೆ ರಾಜನೊಬ್ಬ ।।೫೯।।

CC-O. In Public Domain. Digitized by eGangotri

ಹೊನ್ನ ಹಣವ ಕೊಟ್ಟು ನಾ ನಿನ್ನ ತರಿಸಿದೆ । ಎನ್ನ ಕೂಸೆಂದು ಸಾಕಿದೆನು ।।
ನೀನಾರ ಸುತನೋ ನಾನರಿಯೆನೆನುತಲಿ । ಬಣ್ಣಿಸಿ ಮಾತನಾಡಿದಳು ।।೬೦।।

ಆದರೆ ನಮ್ಮಯ ರಾಜ್ಯಸಿಂಹಾಸನ । ಏರಿದೆ ನಿನ್ನ ಪುಣ್ಯದಲಿ ।।
ನೀಮಾಡಿದುಪಕಾರ ಮರೆಯಲಾರೆನೆಂದು ಪಾದಕ್ಕೆ ಬಂದೆರಗಿದನು ।।೬೧।।

ಬಣ್ಣದಂದಣ ಕಳುಹಿಸಿದ ಸೂಲಗಿತ್ತಿಗೆ । ಮನ್ನೀಸಿ ಮಣೆಯ ಹಾಕಿದರು ।।
ಅಣ್ಣಯ್ಯನೇ ಕರೆಸಿದ ಕಾರಣವೇನೆಂದು । ಬಣ್ಣಿಸಿ ಮಾತನಾಡಿದಳು ।।೬೨।।

ಎತ್ತಲಿಂದಲಿಯನ್ನ ತಂದ ವಾರ್ತೆಗಳೇನು । ಸತ್ಯವಾಗ್ಹೇಳಬೇಕೆನಲು ವಿಪ್ರನು
ಅಂತನೀನಲ್ಲಿಗೆ ತಂದುಕೊಟ್ಟೇನು । ಮುತ್ತುಲಹೊನ್ನಿಗೆ ಆಸೆಮಾಡಿ ।।೬೩।।

ಹಾಕಿದ ಕಲ್ಲುಗುಂಡಾನು ನಿಮ್ಮಮ್ಮಾಗೆ । ಹೂಕ ಮಾತುಗಳಾಡಿದೆನು ।
ಗೋಕುಲದ ಕೃಷ್ಣ ಬಂದಂತೆ ನಿನ್ನ ತಂದು ಸಾಕಿದಳೆಶೋದೆಯಂತೆ ।।೬೪।।

ಮಕ್ಕಳನಗಲಿ ದೇವಕಿಯಂದದಿ । ನಿಮ್ಮ ಹೊಸ್ತಿಲೊಳಗೆ ಕುಳಿತಿಹಳು ।।
ಅಕ್ಕರದಿಂದಾವರನು ಒಡಗೂಡೆಂದು । ಹಸ್ತವ ಮುಗಿದು ಹೇಳಿದಳು ।।೬೫।।

ಮುದುಕ ಮಾತನೆ ಕೇಳಿ ಪದಕ ಮುತ್ತಿನ ಕಂಠಿ ನಗುತ ಹಾಕಿದ ಕೊರಳಲ್ಲಿ ।।
ಜರತಾರಿ ಸೀರೆ ಕುಪ್ಪಸ ಉಡುಗೊರೆಕೊಟ್ಟು । ಕರೆಸಿದ ತಾಯಿತಂದೇರ ।।೬೬।।

ಕರೆದಾರೆಂದರೆ ಕಂಪನ ಹುಟ್ಟಿತು ದೇಹಕ್ಕೆ ।। ಸುರಿಸುತ ಕಣ್ಣಲ್ಲಿ ಜಲಗಳ
ದೊರೆತಾನಕ್ಕೆದರು ನಾವೇನೆಂದು । ಮನದಲ್ಲಿ ಮರುಗುತ್ತ ಯೋಚನೆ ।।೬೭।।
ಮಾಡಿದರು ಬಡಿಸೋನೋ ಬೈದುಬಡಿವೇನೋ ಕೈಯಿಂದ । ಕೂಡಿಸೋನೋ
ಜುಲ್ಮಾನೆಗಳ ಇಡಸೋನೋ ಸೆರೆಮನೆಗಳಿಗೆ ನಮ್ಮಿಂದ । ನುಡಿಸಿಬಿಡುವನೋ
ತಪ್ಪೇನು ।।೬೮।।

ಏನು ಮಾಡುವನೋ ಬಂದಾಜನರೋಳು । ನಮ್ಮ ಮಾನವ ಕಳೆದುಬಿಡವನೊ
ಮಾನಾಭಿಮಾನ ನಿನ್ನದು ಮಹಾಲಕ್ಷ್ಮಿ । ಪಾದಾವ ಗತಿ ಎಂದಳಾಕೆ ।।೬೯।।

ನಡುಗುತ್ತ ಬಂದಾರು ಮುಡಿಯಮುಂದಕ್ಕೆ ಬಾಗಿ ।। ಕಡುಭಯದಿಂದ
ನಿಂದಿಹರು
ಹಡೆದ ತಾಯಿ ತಂದೆ ನೀವೆಯೆನುತ ಬಂದು । ನುಡಿದು ತಾ ಚರಣಕ್ಕೆರಗಿದನು ।।

ಕಂದಾನೆಂದರೆ ಸಂಭ್ರಮವಾಯಿತು । ಆನಂದಬಾಷ್ಪಳುದುರಿದವು । ತಂದೆ
ತಾಯಿ ಮಕ್ಕಳೊಂದಾದರೆನುತಲಿ ದುಂದುಭಿ ಭೇರಿ ಹೊಡೆದಾವು ।।೭೧।।

CC-O. In Public Domain. Digitized by eGangotri

ಹರುಷದಿಂದಲಿ ಇಬ್ಬರೊಂದಾಗಿ ತಾಯೆಂದರು । ಬರಸೀದರಾಗ ಪತ್ರಿಕೆಗಳ ।।
ಕರೆಸೀದರಾಗೊಂದು ಬಳಗದಿಬ್ಬಣದವರ । ಅರಸಿನ ಮದುವೆ ಸಂಭ್ರಮದಿ
ಹಾದಿಗ್ಹಂದರ ಹಾಕಿ ಮೇಲೆ ತೋರಣ ಕಟ್ಟಿ । ಬೀದನೌಬತ್ತು ವಾಲಗವು ।।
ಬ್ರಾಹ್ಮಣರು ನೆರೆದರು । ನಾಲ್ಕು ವೇದವ ಹೇಳುತ್ತ ಮಂಗಳಾಷ್ಟಕವ ।।೭೩।।

ವಲ್ಲಭನೆದುರಿಗೆ ಚೆಲ್ವೆ ಸತಿಯೆಂದು ಚೆಲ್ಲುತ್ತ ಮಂತ್ರಾಕ್ಷತೆಯ ।। ಮಲ್ಲಿಗೆ
ಭಾಷಿಂಗವನು ಕಟ್ಟಿ ಕೊರಳ ಮಾಂಗಲ್ಯ ಬಂಧನ ಮಾಡಿದರು । ಹಾಗಲಂದರ
ದೊಳು ಹಸುರುಪತ್ತಲವನ್ನುಟ್ಟು ।।೭೪।।

ಬೇಗ ನೇಮವ ಬಿಡಿಸಿದರು । ದಾಗು ಬಾಳೆ ಕೂಡಲೆಯ ಭೂಮವನುಂಡು।
ನಾಗೋಲಿಗಳ ಮಾಡಿದರು ।।೭೫।।

ಅರಸೀನ ಕುಂಕುಮ ಅರಳು ಮಲ್ಲಿಗೆ ಜಾಜಿ । ಪರಿಪರಿ ಭಕ್ಷ್ಯಪಾಯಸವು।।
ನರಸಿಂಹನರಸಿಗರ್ಪಿಸಿ ಆರತಿ ಮಾಡಿ । ಮುತ್ತೈದೆತನವ ನೀಡುವಳು ।।೭೬।।

ಮುತ್ತಿನ ಪಲ್ಲಕ್ಕಿಯೊಳಗೆ ಶ್ರೀಗೌರಿಯ ಪಟ್ಟಣದೊಳು ಮೆರೆಸುತಲಿ ।।
ಅರ್ಥಿಯಿಂದಲೆ ಬಂದು ಅರಸು ಸಿಂಹಾಸನವನ್ನಪ್ಪಿದಳಾಗ ಮಹಾಲಕ್ಷ್ಮಿ ।।೭೭।।

ಮಂಗಳಜಯವೆನ್ನಿ ಮಂಗಳಶುಭವೆನ್ನಿ ಮಂಗಳಾಂಗನೆ ಮಹಾಲಕ್ಷ್ಮಿ ।
ಕಂಗಳಾತೆರೆದು ಕಟಾಕ್ಷದಿ ನೋಡೋಳು । ಹಿಂಗೋದು ಸಕಲ ದಾರಿದ್ರ್ಯ ।।೭೮।।

ಬಿತ್ತಿದ ಬೆಳೆರಾಶಿ ಉಕ್ಕುವೊ ಧಾನ್ಯವು ಉಕ್ಕುವೊ ಕ್ಷೀರದಿಂದಲಿ ।
ಲೆಕ್ಕವಿಲ್ಲದೆ ಮನೆತುಂಬ । ಮುತ್ತೈದೆತನವನು ಕೊಡುವಳು ।।೭೯।।

ತಾನು ಕಾಮಧೇನುವಿನಂತೆ ಬಂದು । ಭೀಮೇಶಕೃಷ್ಣನ ಸಹಿತವಾಗಿ
ಲೇಸಾಗಿ ಸಕಲ ಸಂಪತ್ತಾನೆ ಕೊಟ್ಟ ತಾ ವಾಸವಾದಳು ಮನೆಯಲ್ಲಿ ।।೮೦।।

ರಾಗ-ಸುರಟಿ-ಆದಿತಾಳ

(ಆರತಿಯನೆತ್ತಿರೆ ನಾರಿಯರೆಲ್ಲರು ಎಂಬಂತೆ)

ಮಂಗಳ ಪಾವನ ನೊಸಂಗರಂಗಗೆ ತುಂಗವಿಹಂಗರಥಾಂಗ ಕೃಪಾಂಗಗೆ।।ಪ।।
ಸುರನುತಪಾದಗೆ ಸಂದಾಮೋದಗೆ ಗಿರಿಧರನಾಮಗೆ ಕರಿವರಪಾಲಗೆ ।।೧।।

ಯದುಕುಲಧೀಶಗೆ ಸದಮಲವಾಸಗೆ ।। ಮದನನತಾತಗೆ ಶ್ರೀರಮಣೀಶಗೆ ।
ಚದುರಯತೀಶಗೆ ಶ್ರೀತಜನಪೋಶಗೆ ।। ಕವಿನಾಗೇಶನ ಕಯ್ದವಗೆ ।।೨।।

ಶುಕ್ರವಾರದ ಗೌರೀ ಹಾಡು ಸಂಪೂರ್ಣಂ
Sri Vidyabharathi Book Centre, Sringeri

CC-O. In Public Domain. Digitized by eGangotri

ನಮ್ಮ ಸಂಸ್ಥೆಯ ಉಪಯುಕ್ತ ಪ್ರಕಟಣೆಗಳು

- ★ ಗಣಪತಿ ಸ್ತೋತ್ರಮಾಲಾ
- ★ ರಾಜರಾಜೇಶ್ವರಿ ಸ್ತೋತ್ರಮಾಲಾ
- ★ ಆಂಜನೇಯ ಸ್ತೋತ್ರಮಾಲಾ
- ★ ಲಕ್ಷ್ಮೀಹಯಗ್ರೀವ ಸ್ತೋತ್ರಮಾಲಾ
- ★ ಶ್ರೀ ಹರಿ – ವಾಯುಸ್ತುತಿಃ
- ★ ಪ್ರಾರ್ಥನಾ ಮಂಜರಿ
- ★ ದೇವತಾ ಸ್ತೋತ್ರಮಾಲಾ
- ★ ನಿತ್ಯಸ್ತುತಿಃ
- ★ ರುದ್ರತ್ರಿಶತೀನಾಮಾವಳಿಃ
- ★ ದೇವೀಖಡ್ಗಮಾಲಾ ನಾಮಾವಳಿಃ
- ★ ಲಲಿತಾ ತ್ರಿಶತೀ ನಾಮಾವಳಿಃ
- ★ ಕಂದರ್ ಷಷ್ಠಿ ಕವಚಮ್
- ★ ಹನುಮಾನ್ ಚಾಲೀಸಾ
- ★ ಭಜಗೋವಿಂದಮ್
- ★ ಶ್ರೀರಾಮಕಥಾ ಮಹಿಮೆ
- ★ ಶ್ರೀ ಶನಿದೇವರ ಮಹಾತ್ಮೆ
- ★ ದೇವರ ಸ್ತುತಿಗಳು
- ★ ಪತ್ರಂ ಪುಷ್ಪಂ ಫಲಂ ತೋಯಂ

Sri Vidyabharathi Book Centre, Sringeri

CC-O. In Public Domain. Digitized by eGangotri

ಐದು ಶುಕ್ರವಾರದ ಹಾಡು ಮತ್ತು ಶುಕ್ರವಾರದ ಗೌರೀ ಹಾಡು ₹ 20.00

Sri Vidyabharathi Book Centre, Sringeri